## ಪ್ರಬಂಧ

ಕೈ ಜಾರಿ ಬಿದ್ದಾಗಲೇ ಅಪಶಕುನ ಅಂದ್ಕೊಂಡೆ. ಹಂಗೆ ಆತು ನೋಡು. ನಾನು ಯಾವತ್ತಿಂದ ಆರು ಕುದುರೆ ಓಡೋ ಫೋಟ ಆ ಉತ್ತರ ದಿಕ್ಕಿನ ಮೂಲೆಗೆ ತಂದು ನೇತಾಕು ಅಂದೆ. ನನ್ ಮಾತೆಲ್ಲಿ ಕೇಳ್ತಿಯ ನೀನು. ನೋಡೀಗ ಬರೀ ಜಗಳ ಜಗಳ. ಒಳ್ಳೇದ್ ಮಾಡವ್ವ ತಾಯಿ. ಅಮಾಸೆಗೆ ಒಂದು ಕೋಳಿ ಕುಯಿದು ನಿನ್ನ ಹರಕೆ ತೀರಿಸ್ತೀನಿ ಅಂತ ಮೊದ್ಲು ಚೌಡವ್ವನ ಬೇಡ್ಕೊಬೇಕು" ಎಂದು ಚುಂಚುಕ ಹಿಡಿದು ಅಡುಗೆಮನೆ ಕಡೆ ಹೊರಟರು. ನನ್ನ ಟೀ ಕಥೆ ಅಲ್ಲಿಗೆ ಮುಗಿದಿತ್ತು.

ಗೆಳೆಯ, "ನಮ್ಮನೇಗೆ ಈ ರಗಳೆ ಪಂಚಾಯ್ತಿ ದಿನಾ ತಪ್ಪಲ್ಲ. ಬಾ, ವಿಷ್ಣುಭವನದಲ್ಲಿ ಬಿಸಿ ಇಡ್ಲಿ ತಿನ್ನಿಸ್ತೀನಿ. ನೋಡ್ದಲ್ಲ ಅವಳ ಲಾಯರ್ ಗಿರಿ. ಏನಾದ್ರೂ ಒಂದಕ್ಕೊಂದು ಮಾತಲ್ಲಿ ಸಂಬಂಧ ಇತ್ತಾ? ಏನೋ ಕೇಳಿದರೆ ಇನ್ನೇನೋ ಹೇಳ್ತಾಳೆ" ಎಂದು ನನ್ನ ಎಬ್ಬಿಸಿಕೊಂಡು ಹೊರಟ. ಆದರೂ ಗೆಳೆಯನ ಮಾತಿನ್ನೂ ಮುಗಿದಿರಲಿಲ್ಲ. "ನೋಡು ಇವಳನ್ನ ಕಟ್ಕೊಂಡಾಗಿಂದ ಬರೀ ಹರಕೆ ತೀರಸ್ದೇ ಆತು. ಒಂದು ಮಗಿಯಂಗಿಲ್ಲ ಮತ್ತೊಂದು ಹರಕೆ ಏರಿಸಿ ಕುಂತು ಬಿಡ್ತಾಳೆ" ಎಂದು ಕೂಗಾಡುತ್ತಲೇ ಇದ್ದ. ಒಳಗಿಂದಲೇ ಜಯಮ್ಮ, "ಹೇ... ಹಂಗನ್ನ ಬ್ಯಾಡ ಬುಡ್ತು ಅನ್ನು. ಚೌಡವ್ವ ಶಾಪ ಹಾಕ್ತಾಳೆ" ಎಂದು ಎಚ್ಚರಿಕೆ ಕೊಟ್ಟರು.

ಈ ನಡುವೆ ಜಯಮ್ಮರ ಮಗ ಕಾಯಿಲೆಯಾಗಿ ಆಸ್ಪತ್ರೆ ಸೇರಿದ್ದ. ಅವನು ಡಿಸ್ಚಾರ್ಜ್ ಆಗುವ ಹೊತ್ತಿಗೆ ಜಯಮ್ಮ ಬರೋಬ್ಬರಿ ಹದಿನೈದು ಹರಕೆಗಳ ಹೊತ್ತಿದ್ದರು. ಇದರಲ್ಲಿ ಉಚ್ಚಂಗಿಯಮ್ಮನಿಗೆ ಕುರಿ, ಚೌಡಮ್ಮನಿಗೆ ಜೋಡಿ ನಾಟಿಕೋಳಿ, ಬೆನಕೊಂಡದ ಮನೆದೇವರು ಕರಿಯಮ್ಮನಿಗೆ ಹಾಲುತುಪ್ಪದ ಅಭಿಷೇಕ ಪ್ರಮುಖವಾದವು. ಯಾವುದಕ್ಕೂ ಗೆಳೆಯ ಒಪ್ಪದಿದ್ದಾಗ ರಾಜಿ ಪಂಚಾಯ್ತಿಗೆ ನನ್ನ ಕರೆದರು. ನಾನು ಜಯಮ್ಮನ ಪರ ವಾದ ಮಂಡಿಸಿದೆ. ಖುಷಿಯಾದ ಜಯಮ್ಮ, "ಈ ಹರಕೆಯೆಲ್ಲಾ ನಿಮ್ಮ ಜೊತೆ ಬಂದು ತೀರಿಸ್ತೀನಿ ಅಂತ ಕೇಳ್ಕೊಂಡಿದ್ದೀನಿ ಅಣ್ಣಾರೆ. ನೀವು ಮಾತ್ರ ತಪ್ಸಂಗಿಲ್ಲ" ಎಂದು ನನ್ನನ್ನೂ ಕೂಡಿಸಿಕೊಂಡರು. ಮೊದಲಿಗೆ ಎಲ್ಲಾ ದೇವರುಗಳಿಗೆ ಹಣ್ಣುಕಾಯಿ ಪೂಜೆ ಸಲ್ಲಿಸುವುದೆಂದು ತೀರ್ಮಾನವಾಯಿತು. ನನ್ನ ಕಾರಿನಲ್ಲೇ ಹೋಗುವುದೆಂದು ದಿನವನ್ನೂ ಗೊತ್ತು ಮಾಡಿಕೊಂಡೆವು.

"ದೇವಸ್ಥಾನದ ಹತ್ತಿರ ಒಂದಕ್ಕೆ ಎರಡು ರೇಟು ಹಚ್ತಾರೆ. ತೆಂಗಿನ ಕಾಯಿ, ಹೂವು, ಕರ್ಪೂರ, ಊದುಬತ್ತಿಗೆ ಬಾಯಿಗೆ ಬಂದ ರೇಟು ಕೊಡಬೇಕು. ಎಲ್ಲಾನೂ ಹೋಲ್ ಸೇಲಾಗಿ ಬಜಾರಲ್ಲೇ ಖರೀದಿ ಮಾಡ್ಕೊಂಡು ಹೋಗೋದು ವಾಸಿ" ಎಂದು ಜಯಮ್ಮ ಫರ್ಮಾನು ಹೊರಡಿಸಿದರು. ಜಿಪುಣ ಗೆಳೆಯ, "ಇದು ಒಳ್ಳೇ ಐಡಿಯಾ" ಎಂದು ಒಪ್ಪಿ ಹದಿನೈದು ಪ್ಲಾಸ್ಟಿಕ್ ಕೈಚೀಲ ತಂದು ಎಲ್ಲವನ್ನೂ ಜತನದಿಂದ ಪ್ಯಾಕ್ ಮಾಡಿದ. ಬೆಳಗ್ಗೆ ಕ್ಯಾಲೆಂಡರಿನಲ್ಲಿದ್ದ ಕಾಲ ನೋಡಿ ಹೊರಟೆವು. ಮೊದಲು ಕಾರನ್ನು ಉತ್ತರದಿಕ್ಕಿನ ಕಡೆ ಚಲಾಯಿಸಿ ನಂತರ ಪೂರ್ವ ದಿಕ್ಕಿನ ಕಡೆ ಬಿಡಬೇಕೆಂದು ಜಯಮ್ಮ ನನಗೆ ಆದೇಶಿಸಿದರು. ಆಯ್ತೆಂದು ಒಪ್ಪಿದೆ.

ಎಲ್ಲಾ ಕವರುಗಳನ್ನು ಸಾಲಾಗಿ ಡಿಕ್ಕಿಯಲ್ಲಿ ಜೋಡಿಸಲಾಗಿತ್ತು. ಶಿಕಾರಿಪುರ ದಾಟಿ ಮುಂದೆ ಹೋದಾಗ ಪೊಲೀಸರು ಚೆಕ್ಕಿಂಗ್ ಎಂದು ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದರು. ಅದು ಚುನಾವಣೆಯ ಕಾಲ. ಹಣ ಸಾಗಿಸಬಹುದೆಂಬ ಗುಮಾನಿಯಿಂದ ಎಲ್ಲಾ ವಾಹನಗಳನ್ನು ಮೂರು ದಾರಿ ಕೂಡುವ ಜಾಗೆಯಲ್ಲಿ ಚೆಕ್‌ಪೋಸ್ಟ್ ಮಾಡಿಕೊಂಡು ಪೊಲೀಸರು, ಮಿಲಿಟರಿಯವರು ಗಸ್ತು ಮಾಡುತ್ತಿದ್ದರು. ಕಾರಿನ ಡಿಕ್ಕಿ ತೆಗೆದಾಗ ಉತ್ತರ ಭಾರತದ ಮಿಲಿಟರಿ ಸಿಪಾಯಿ ದಂಗಾಗಿ, "ಏ ಕ್ಯಾ ಹೈ" ಎಂದು ಏರು ದನಿಯಲ್ಲಿ ನನ್ನ ಪ್ರಶ್ನಿಸಿದ. ಅವನ ಹೆಗಲಲ್ಲಿ ಉದ್ದದ ತುಪಾಕಿ ನೇತಾಡುತ್ತಿತ್ತು. ನಾನು ಗೆಳೆಯನ ಕರೆದು, "ಇದೇನಂತ ಕೇಳ್ತಿದ್ದಾರೆ. ಹೇಳು ಬಾ" ಎಂದೆ. ಅದಕ್ಕವನು, "ನಂಗೆಲ್ಲಿ ಸಾಬರ ಭಾಷೆ ಬರುತ್ತೋ ಮಾರಾಯ" ಎಂದ. "ಲೇ, ಅವನು ಕೇಳ್ತಿರೋದು ಹಿಂದಿಯಲ್ಲಿ. ಹೊರಗೆ ಬಂದು ಹೇಳು" ಎಂದೆ. "ಹಿಂದಿನೋ, ಉರ್ದುನೋ! ಅವನಿಗೆ ಅರ್ಥ ಆಗಂಗೆ ನೀನೇ ಹರಕೆ ಪೂಜಾ ಸಾಮಾನು ಅಂತೇಳು" ಎಂದು ಕೂತಲ್ಲೇ ಕೊಸರಾಡುತ್ತಿದ್ದ.